ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
ಅಧೀಕ್ಷಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನಾ ವೃತ್ತ,
ನವನಗರ, ಬಾಗಲಕೋಟ-02
Tel: 08354/297330, Mob No- 9449877676

HUBLI ELECTRICITY SUPPLY COMPANY LIMITED
(Wholly owned Govt. of Karnataka undertaking)
Superintending Engineer (Ele.)
O & M Circle, Navanagar, Bagalkot-02
E-mail ID: seebgkt.hescom@gmail.com
dcabgkt.hescom@gmail.com
Corporate Identity Number(CIN): U31401KA2002SGC030437

ಕ್ರಮ ಸಂಖ್ಯೆ ;ಬಿಜಿಕೆ/ಅಅ(ವಿ)/ಉಲೆವಿ/ಸಲೆ/2022-23/ 1512-1517 ದಿನಾಂಕ : 17 MAY 2022

ಪೀಠಿಕೆ :

ದಿನಾಂಕ: 27.04.2022 ರಂದು ಮಧ್ಯಾಹ್ನ 4.30 ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರ ಅಧ್ಯಕ್ಷತೆಯಲ್ಲಿ ಬಾಗಲಕೋಟ ಜಿಲ್ಲೆಯ ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆಯ ಸಭೆಯ ನಡಾವಳಿಗಳು.

ಹಾಜರಿದ್ದವರು:1) ಶ್ರೀ ನಾರಾಯಣ ಕಳ್ಳಿಮನಿ, ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ.
2) ಶ್ರೀ ಬಾಲಾಜಿಸಿಂಗ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಹುನಗುಂದ.
3) ಶ್ರೀ ಇಬ್ರಾಹಿಂ ಮ್ಯಾಗೇರಿ ಶಾಖಾಧಿಕಾರಿ, ಅಮೀನಗಡ.
4) ಶ್ರೀಮತಿ:ಮಂಜುಳಾ ಎಂ. ಹುಲ್ಯಾಳ ಗಾಯತ್ರಿ ನಗರ ಮನೆ ನಂ-13, ಸೂಳಿಭಾವಿ ತಾ॥ಹುನಗುಂದ ಜಿ॥ಬಾಗಲಕೋಟೆ

ಪ್ರಕರಣ ಸಂಖ್ಯೆ: 02/2022

ಶ್ರೀಮತಿ: ಮಂಜುಳಾ ಎಮ್. ಹುಲ್ಯಾಳ,
ಪ್ರತಿನಿಧಿ: -------- ದೂರುದಾರರು.

ವಿರುದ್ಧ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಹುವಿಸಕಂನಿ., -------- ಪ್ರತಿವಾದಿ
ಹುನಗುಂದ

ವಿಷಯ: "ಖಾಯಂ ವಿದ್ಯುತ್ ಸಂಪರ್ಕ ಕೊಡದೇ ಇರುವ" ಕುರಿತು.

*&*&*

ಪ್ರಕರಣ ಸಂಖ್ಯೆ: 02/2020 ರಕ್ಕೆ ಸಂಬಂಧಿಸಿದಂತೆ, ದಿನಾಂಕ:27.04.2022 ರಂದು ಮಧ್ಯಾಹ್ನ 4.30 ಘಂಟೆಗೆ ಶ್ರೀ ಕಾಶಿನಾಥ. ಹಿರೇಮಠ, ಅಧೀಕ್ಷಕ ಅಭಿಯಂತರರು(ವಿ), ಬಾಗಲಕೋಟ ಹಾಗೂ ಅಧ್ಯಕ್ಷರು, ಗ್ರಾಹಕರ ಕುಂದು ಕೊರತೆ ನಿವಾರಣಾ ವೇದಿಕೆ, ವೃತ್ತ ಕಛೇರಿ, ಹೆಸ್ಕಾಂ ಬಾಗಲಕೋಟ ರವರು ಸಭೆಗೆ ಹಾಜರಿದ್ದ ಎಲ್ಲ ಸದಸ್ಯರು/ಅಧಿಕಾರಿಗಳು/ಗ್ರಾಹಕರನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

ಶ್ರೀಮತಿ: ಮಂಜುಳಾ ಎಮ್. ಹುಲ್ಯಾಳ ಗಾಯತ್ರಿ ನಗರ ಮನೆ ನಂ-13, ಸೂಳಿಭಾವಿ ತಾ॥ಹುನಗುಂದ ಜಿ॥ಬಾಗಲಕೋಟೆ ರವರ ಹೇಳಿಕೆ :

ಒಂದು ವರ್ಷದಿಂದ ತಾತ್ಕಾಲಿಕ ವಿದ್ಯುತ್ ಸಂಪರ್ಕ ಪಡೆಯಲಾಗಿದೆ. ಸ್ಥಾವರ ಸಂಖ್ಯೆ:ಟಿ.ಎಮ್.ಪಿ-675 ನಿವೇಶನಗಳು ಅಭಿವೃದ್ಧಿ ಯಾಗಿರುವದಿಲ್ಲ. ಸದರೀ ನಿವೇಶನದ ಅಭಿವೃದ್ಧಿ ಶುಲ್ಕ ಹಾಗೂ ನಿಗಮದ ನಿಯಮಾನುಸಾರ ಹಣ ಭರಣಾ ಮಾಡಲು ಒಪ್ಪಿಗೆ ಇದ್ದು, ನನಗೆ ಖಾಯಂ ವಿದ್ಯುತ್ ಸಂಪರ್ಕ ನೀಡಲು ವಿನಂತಿಸಿದರು. ಹಾಗೂ

8

ಈಗಾಗಲೇ ನನ್ನ ನಿವೇಶನದ ಪಕ್ಕದಲ್ಲಿ ಇರುವಂತಹ 11 ಮನೆಗಳಿಗೆ ಖಾಯಂ ವಿದ್ಯುತ್ ಸಂಪರ್ಕ ನೀಡಲಾಗಿರುತ್ತದೆ. ಆದರೆ ನಮ್ಮ ಮನೆಗೆ ಮಾತ್ರ ಕೊಡುತ್ತಿಲ್ಲ ಎಂದು ತಿಳಿಸಿದರು.

ಶ್ರೀ. ಬಾಲಾಜಿಸಿಂಗ್, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಹುನಗುಂದ ರವರು ಸಭೆಗೆ ಹಾಜರಾಗಿರುತ್ತಾರೆ ಹಾಗೂ ಅವರ ಹೇಳಿಕೆ:

ಸದರೀ ಲೇಔಟ್ ನಿವೇಶನಗಳು ಅಭಿವೃದ್ಧಿ ಪಡಿಸಿರುವದಿಲ್ಲ. ಹಾಗೂ ಅಭಿವೃದ್ಧಿ ಶುಲ್ಕ ಭರಣಾ ಮಾಡಿರುವದಿಲ್ಲವೆಂದು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ ಹುನಗುಂದ ಹಾಗೂ ಶಾಖಾಧಿಕಾರಿ ಕಾ ಮತ್ತು ಪಾ ಶಾಖೆ ಹೆಸ್ಕಾಂ ಅಮೀನಗಡ ರವರಿಗೆ ಸದರೀ ನಿವೇಶನಕ್ಕೆ ಸಂಬಂಧಿಸಿದ ಅಂದಾಜು ಪತ್ರಿಕೆ ತಯಾರಿಸಿ ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆಯಲು ಸೂಚಿಸಿ ಸದರೀ ಪ್ರಕರಣವನ್ನು ಮುಂದಿನ ಸಭೆಯಲ್ಲಿ ಇತ್ಯರ್ಥಪಡಿಸಲಾಗುವುದು ಎಂದು ತಿಳಿಸಿ ಸಭೆಯನ್ನು ಮುಂದೂಡಲಾಯಿತು.

ಸದರಿ ವಾದಿ ಪ್ರತಿವಾದಿಗಳ ಹೇಳಿಕೆಗಳನ್ನು ಆಲಿಸಿ, ಮಾನ್ಯ ವೇದಿಕೆಯು ಈ ಕೆಳಗಿನಂತೆ ಆದೇಶ ನೀಡಲಾಗಿದೆ.

## ಆ ದೇ ಶ

ಕ್ರ.ಸಂ:ಬಿಜಿಕೆ/ಅಇಂ(ವಿ)/ಉಲೆನಿ/ಸಲೆ/ಹಿಸ-1/2022-23/ ದಿನಾಂಕ:

ಸಹಾಯಕ ಕಾರ್ಯನಿರ್ವಾಹಕ ಇಂಜನೀಯರ(ವಿ) ಕಾ ಮತ್ತು ಪಾ ಉಪವಿಭಾಗ ಹೆಸ್ಕಾಂ, ಹುನಗುಂದ ಹಾಗೂ ಶಾಖಾಧಿಕಾರಿ ಅಮೀನಗಡ ರವರು ಸದರೀ ಲೇಔಟ ಗೆ ಸಂಬಂಧಿಸಿದ ಅಂದಾಜು ಪತ್ರಿಕೆಗಳನ್ನು ಮಂಜೂರಾತಿ ಪಡೆಯಲು ದಿನಾಂಕ:25-04-2022 ರಂದು ವೃತ್ತ ಕಚೇರಿಗೆ ಸಲ್ಲಿಸಿದ್ದು, ಲೇಔಟ ನ ಅಂದಾಜು ಪತ್ರಿಕೆ ಪರಿಶೀಲಿಸಿ ಮಂಜೂರಾತಿ ನೀಡುವುದು. ನಂತರ ನಿಗಮದ ನಿಯಮಾನುಸಾರ ಸದರೀ ಗ್ರಾಹಕರಿಗೆ ಖಾಯಂ ವಿದ್ಯುತ್ ಸಂಪರ್ಕ ನೀಡಲು ಸೂಚಿಸಿ, ಸದರೀ ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಶ್ರೀ ನಾರಾಯಣ ಕಳ್ಳಿಮನಿ
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಹಾಗೂ ಗ್ರಾ.ಕುಂ.ಕೊ.ನಿ.,ವೇದಿಕೆಯ
ಸದಸ್ಯರು, ಬಾಗಲಕೋಟೆ.

ಶ್ರೀ ಸಿ ವ್ಹಿ ಶಿವಪೂಜಿ, ಸದಸ್ಯರು,
ಗ್ರಾ.ಕುಂ.ಕೊ.ನಿ.ವೇ, ಬಾಗಲಕೋಟೆ.

17/5

ಅಧ್ಯಕ್ಷರು,
(ಕಾಶೀನಾಥ.ಜಿ ಹಿರೇಮಠ,)
ಅಧೀಕ್ಷಕ ಅಭಿಯಂತರರು(ವಿ) ಬಾಗಲಕೋಟೆ ಹಾಗೂ ಗ್ರಾಹಕರ
ಕುಂದು ಕೊರತೆ ನಿವಾರಣಾ ವೇದಿಕೆ
ಕಾ ಮತ್ತು ಪಾ ವೃತ್ತ ಹುವಿಸಕಂನಿ.,ಬಾಗಲಕೋಟೆ

ಪ್ರತಿಯನ್ನು:

1) ಮುಖ್ಯ ಇಂಜನೀಯರ್(ವಿ) ಕಾ ಮತ್ತು ಪಾ ವಲಯ ಹುವಿಸಕಂನಿ., ಬೆಳಗಾವಿ. ರವರ ದಯಾಪರ ಮಾಹಿತಿಗಾಗಿ.
2) ಪ್ರಧಾನ ವ್ಯವಸ್ಥಾಪಕರು(ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಹುವಿಸಕಂನಿ., ಹುಬ್ಬಳ್ಳಿ ರವರ ದಯಾಪರ ಮಾಹಿತಿಗಾಗಿ.
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ವಿಭಾಗ ಹೆಸ್ಕಾಂ, ಬಾಗಲಕೋಟೆ ರವರ ಮಾಹಿತಿಗಾಗಿ. .
4) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾ ಮತ್ತು ಪಾ ಉಪ-ವಿಭಾಗ ಹೆಸ್ಕಾಂ, ಹುನಗುಂದ ರವರ ಮಾಹಿತಿಗಾಗಿ.
5) ಶಾಖಾಧಿಕಾರಿ, ಕಾ ಮತ್ತು ಪಾ ಶಾಖೆ ಹೆಸ್ಕಾಂ, ಅಮೀನಗಡ ಮಾಹಿತಿಗೆ ಸೂಕ್ತ ಕ್ರಮಕ್ಕಾಗಿ
6) ಶ್ರೀಮತಿ:ಮಂಜುಳಾ ಎಂ. ಹುಲ್ಯಾಳ ಗಾಯತ್ರಿ ನಗರ ಮನೆ ನಂ-13, ಸೂಳಿಭಾವಿ ತಾ॥ಹುನಗುಂದ ಜಿ॥ಬಾಗಲಕೋಟೆ ರವರ ಮಾಹಿತಿಗಾಗಿ. ಮೋ.ಸಂಖ್ಯೆ:9591821682.